# 13

# ಕ್ರೈಸ್ತತ್ವವು ಉತ್ತಮವಾದದ್ದೇ!

# (7:1-28)

ಇಬ್ರಿಯ ಪತ್ರಿಕೆಯಲ್ಲಿ, "ಉತ್ತಮ" ಎಂಬುದು ಪ್ರಮುಖ ಪದವಾಗಿದೆ. ಕ್ರೈಸ್ತರು ದೇವಾಲಯವನ್ನಾಗಲೀ, ಮಹಾಯಾಜಕನನ್ನಾಗಲೀ, ಅಥವಾ ಯಜ್ಞಗಳನ್ನಾಗಲೀ ಹೊಂದದೆ ಇರುವದರಿಂದ ಯೆಹೂದ ಮತವೇ ಶ್ರೇಷ್ಟವಾದದದ್ದು ಎಂಬ ಅವರ ಹೇಳಿಕೆಯ ವಿಚಾರವನ್ನು ಕ್ರೈಸ್ತರು ಅರಿತ್ತಿದ್ದರು. ಅದಕ್ಕೆ ಪ್ರತಿಕ್ರಿಯಿಸಿ, "ನೀವು ಕ್ರೈಸ್ತರಾಗುವಾಗ ಆ ಯಾವುದೇ ಸಂಗತಿಗಳನ್ನು ನಿರಾಕರಿಸುವ ಅಗತ್ಯವಿಲ್ಲ" ಎಂದು ಬರಹಗಾರನು ತಿಳಿಸಿದನು. ನೀವು ಸಹ ಉತ್ತಮವಾದ ಮಹಾಯಾಜಕನನ್ನು ಉತ್ತಮವಾದ ದೇವಾಲಯವನ್ನೂ ಉತ್ತಮವಾದ ಯಜ್ಞಗಳನ್ನು ಹೊಂದಿರುವಿರಿ. ಕ್ರೈಸ್ತತ್ವವು ಉತ್ತಮವಾದದ್ದೇ ಎಂದನು!

ಹಿಂದಿನ ಪಾಠದಲ್ಲಿ ಇಬ್ರಿಯ 7ನೇ ಅಧ್ಯಾಯವನ್ನು ನೋಡಿದೆವು: ಪತ್ರಿಕೆಯಲ್ಲಿನ ಪ್ರಮುಖ ಅಂಶವನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಯೇಸು ಉತ್ತಮವಾದ ಮಹಾಯಾಜಕನಾಗಿದ್ದಾನೆ. ಯಾಕೆಂದರೆ ಯೇಸು ಮೆಲ್ಕಿಜೆದೇಕನ ತರಹದ ಯಾಜಕನಾಗಿದ್ದಾನೆ (6:20). ಹಾಗೂ ಅಧ್ಯಾಯ 7ರಲ್ಲಿ ಇನ್ನು ಅಧಿಕವಾದ ಸತ್ಯಾಂಶಗಳಿವೆ. ಅಧ್ಯಾಯದ ಕೊನೆಯಲ್ಲಿ, ಮುಂದಿರುವ ಕೆಲವು ಅಂಶಗಳನ್ನು ತಿಳಿಸಿ ಸಮಾಪ್ತಿಮಾಡಲಾಗಿದೆ. ಈ ಪಾಠದಲ್ಲಿ ಸಹ ಅಧ್ಯಾಯ 7ರಲ್ಲಿರುವ ಬೇರೆ ಅಂಶಗಳನ್ನು ಧ್ಯಾನ ಮಾಡೋಣ.

## ಯೇಸು, *ಉತ್ತಮವಾದ* ಮಹಾಯಾಜಕನು

ಲೇವಿಯ ವಂಶದ ಯಾಜಕನಿಗಿಂತಲೂ, ಯೇಸು ಉತ್ತಮನು ಎನ್ನಲಾಗಿದೆ. ಯೇಸು ಲೇವಿಯ ವಂಶದವನಾಗದೆ ಇರುವದರಿಂಂದ, ಆತನು ಮಹಾಯಾಜಕನಲ್ಲ ಎಂದು ಯೆಹೂದ್ಯರು ತರ್ಕಮಾಡಬಹುದು (ನೋಡಿರಿ ವಚನ 14). ಯೇಸು ಬೇರೆ ಕುಲದವನಾದರೂ, ಯಾಜಕ ವೃತ್ತಿಗೆ ಅರ್ಹನಾಗಿದ್ದನು ಎಂದು ಬರಹಗಾರನು ತಿಳಿಸಿರುವನು, ಆತನು ತನ್ನ ಪಾತ್ರವನ್ನು ನೆರವೇರಿಸಿರುವನು. ಆತನು ಸರ್ವಸಂಪೂರ್ಣನಾಗಿರುವದರಿಂದ, ಆತನು ಮಹಾಯಾಜಕನು ಎಂದು ಬರಹಗಾರನು ತಿಳಿಸಿದನು (ವಚನ 28); ಹಾಗೂ ಆತನು ಅರಸನು ಮತ್ತು ಬದಲಾಗದವನೂ ಆಗಿರುವನು (ವಚನ 25).

## ಕ್ರೈಸ್ತತ್ವದಲ್ಲಿರುವದೆಲ್ಲವೂ ಉತ್ತಮವೇ

### ಈ ಹೇಳಿಕೆಯ ಅರ್ಥವೇನು

ಕ್ರೈಸ್ತತ್ವದಲ್ಲಿರುವದೆಲ್ಲವೂ ಉತ್ತಮವಾಗಿರುವದರಿಂದ ಕ್ರೈಸ್ತತ್ವವು ಉತ್ತಮವೇ ಎಂದು ಬರಹಗಾರನು ವಾದಿಸಿರುವನು. ಅದು ಉತ್ತಮವಾದ "ನಿರೀಕ್ಷೆಯನ್ನು" (ವಚನ 19) ಮತ್ತು ಒಂದು ಉತ್ತಮವಾದ ಒಡಂಬಡಿಕೆಯನ್ನು ಹೊಂದಿರುತ್ತದೆ (ವಚನ 22; ನೋಡಿರಿ 8:6). ಕ್ರೈಸ್ತತ್ವವು ಉತ್ತಮವಾದ ಯಜ್ಞಗಳನ್ನು ಹೊಂದಿರುತ್ತದೆ (7:27; ನೋಡಿರಿ 9:23). ಈ ನಿಮಿತ್ತವಾಗಿ (8:2) ಕ್ರೈಸ್ತತ್ವವು, ಯುದಾಯ ಮತಕ್ಕಿಂತಲೂ ಕೆಳಮಟ್ಟದ್ದಲ್ಲ ಎಂದು ಬರಹಗಾರನು ತಿಳಿಸಿರುವನು.

**ಪ್ರಚಲಿತವಾಗಿ ಇದರ ಅರ್ಥವೇನು**

ಈ ಸತ್ಯಗಳನ್ನು ಪ್ರಚಲಿತವಾಗಿ ಅಳವಡಿಸಿಕೊಳ್ಳಬಹುದೇ? ಹೌದು, ಇಬ್ರಿಯ ಓದುಗರು ಮಾಡಿದ್ದನ್ನೇ, ನಾವುಗಳು ಮಾಡಬೇಕು. ಕ್ರೈಸ್ತತ್ವವು, ಯುದಾಯ ಮತಕ್ಕಿಂತಲೂ ಕೆಳಮಟ್ಟದ್ದು ಎಂದು ಭಾವನೆಯಿದ್ದರೂ, ಪ್ರಪಂಚದ ಸಂಗತಿಗಳಿಗಿಂತಲೂ, ಕ್ರೈಸ್ತತ್ವವು ಮೇಲ್ಮಟ್ಟದ್ದಾಗಿದೆ. ನಾವುಗಳು ಪ್ರಸಿದ್ಧಿ ಹೊಂದಲು ಆನಂದಿಸಲು, ಅಥವಾ ಯಶಸ್ವಿ ಸಾಧಿಸಲು ಯೇಸುವಿನ ಬದಲು ಲೋಕವನ್ನೇ ಹಿಂಬಾಲಿಸಬೇಕು ಎಂಬುದು ಕೆಲವರ ವಾದವಾಗಿದೆ. ಒಂದು ವೇಳೆ, ಇಬ್ರಿಯ ಬರಹಗಾರನು ಪ್ರಚಲಿತವಾದ ನಮಗೆ ಪತ್ರಿಕೆಯನ್ನು ಬರೆಯುವದಾಗಿದ್ದರೆ, ಕ್ರೈಸ್ತತ್ವವು ಉತ್ತಮವಾದದ್ದು ಎಂದು ಬರೆಯುವ ಸಾಧ್ಯತೆಯಿತ್ತು - ಲೋಕದ ಸಂಗತಿಗಳಾಗಿಂತಲೂ ಉತ್ತಮವಾದದ್ದೇ! ಉದಾಹರಣೆಗೆ ಲೋಕವು *ತಾತ್ಕಾಲಿಕವಾದ* ಆನಂದ ಹಾಗೂ ಸುಖವನ್ನು ನೀಡುವದಾದರೆ, ಕ್ರೈಸ್ತತ್ವವು ನಿರಂತರವಾದ ಯಶಸ್ವಿ, ಸುಖ ಹಾಗೂ ಆನಂದವನ್ನು ನೀಡುತ್ತದೆ (7:25; 11:24-26).

---

## ಬೋಧಕರಿಗಾಗಿ ಟಿಪ್ಪಣಿ

ಇದು ಪುನರಾವರ್ತನೆಯ ಪಾಠವಾಗಿದೆ. ಹಿಂದಿನ ಸತ್ಯಾಂಶಗಳಿಗಾಗಿ ಈ ಪಾಠವನ್ನು ಬಳಸಿರಿ; ಎರಡನೆ ಭಾಗವನ್ನು ಅದರ ಹಿಂದಿನ ಪಾಠಕ್ಕೆ ಬಳಸಿರಿ! ಲೋಕವು ಹೇಳಿರುವ ಸುಳ್ಳುಗಳ ಬಗ್ಗೆ ಪರಿಶೀಲಿಸಿರಿ (ಕ್ರೈಸ್ತರಾದರೆ ಸುಖವಿರುವದಿಲ್ಲ ಎಂಬ ಅಂಶ).

ಸತ್ಯವನ್ನು ಹಾಗೂ ಸುಳ್ಳನ್ನು ಎಂಬ ಚಿತ್ರವನ್ನು ಕಪ್ಪು ಹಲಗೆ ಎರಡು ಬದಿಗಳಲ್ಲಿ ಬರೆಯಿರಿ. ಕ್ರೈಸ್ತತ್ವವೇ ಉತ್ತಮವಾದದ್ದು ಎಂದು ಬೋಧಿಸಿರಿ. ಸ್ಥಳೀಯ ಧರ್ಮಗಳ ಸಂಗಡ ಕ್ರೈಸ್ತತ್ವವನ್ನು ಹೋಲಿಸಿ ಪಾಠಮಾಡಿರಿ.